**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ನಾಗಮಂಗಲ.**

ಸಿ.ಸಿ- 560/2023

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ವಿಜಯಲಕ್ಷ್ಮಿ | ಡಿ.ಡಬ್ಲ್ಯೂ | : | 1 |
| ತಂದೆ / ಗಂಡನ ಹೆಸರು | : | ನರಸಿಂಹಮೂರ್ತಿ | ದಿನಾಂಕ | : | 16-07-2026 |
| ವಯಸ್ಸು | : | 56 ವರ್ಷ | | | |
| ಉದ್ಯೋಗ | : | ಗೃಹಿಣಿ | | | |
| ವಾಸಸ್ಥಳ | : | ಹುಣಸೆಮಾರನಹಳ್ಳಿ, ಬೆಂಗಳೂರು. | | | |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ. ಆರ್. ಆರ್. ಕೆ. ವಕೀಲರಿಂದಃ

1. ದಿನಾಂಕಃ 22-01-2017 ರಂದು ನನ್ನ ಮಗ ವಿನಯ್ ರವರ ಮದುವೆ ಫಿರ್ಯಾದುದಾರರ ಮಗಳ ಜೊತೆ ಆಗಿತ್ತು. ಸದರಿ ಮದುವೆಯ ಕಾರಣ ಫಿರ್ಯಾದುದಾರರು ನನಗೆ ಪರಿಚಯ ಆಗಿರುತ್ತಾರೆ. ನನ್ನ ಮಗ ಹಾಗೂ ಸೊಸೆ ಮಾಯಸಂದ್ರ ಗ್ರಾಮದಲ್ಲಿ ಇರುವ ನಮ್ಮ ನೆಂಟರ ಮನೆಗೆ ಹೋಗಿದ್ದರು. ದಿನಾಂಕಃ 28-01-2023 ರಂದು ನನ್ನ ಸೊಸೆ ಬಟ್ಟೆ ತೊಳೆಯಲು ಮಾಯಸಂದ್ರ ಕೆರೆಗೆ ಹೋಗಿದ್ದು ಕಾಲು ಜಾರಿ ಕೆರೆಗೆ ಬಿದ್ದು ಮೃತ ಹೊಂದಿರುತ್ತಾರೆ. ಸದರಿ ವಿಚಾರವಾಗಿ ಫಿರ್ಯಾದುದಾರರು ನನ್ನ ಮಗ, ನನ್ನ ಗಂಡ ಹಾಗೂ ನನ್ನ ವಿರುದ್ಧ ವರದಕ್ಷಿಣೆ ಕಿರುಕುಳ ಹಾಗೂ ಕೊಲೆಗೆ ಸಂಬಂಧಿಸಿದಂತೆ ತುರುವೆಕೆರೆ ಪೋಲಿಸ್ ಠಾಣೆಗೆ ದೂರು ನೀಡಿದ್ದರು. ಆ ನಂತರ ಫಿರ್ಯಾದುದಾರರ ತಮ್ಮ ಚಂದ್ರಶೇಖರ್ ರವರು 50 ಲಕ್ಷ ರೂಪಾಯಿಗಳನ್ನು ಕೊಡಬೇಕು ಎಂದು ನಮಗೆ ಕಿರುಕುಳ ನೀಡಿದರು. ಆ ನಂತರ ಸದರಿ ಚಂದ್ರಶೇಖರ್ ರವರು ನನ್ನ ಅಂಗಡಿಗೆ ಸಂಬಂಧಿಸಿದಂತೆ ಕ್ರಯ ಪತ್ರವನ್ನು ಬರೆಯಿಸಿಕೊಂಡು ಭದ್ರತೆಗಾಗಿ ನನ್ನಿಂದ 4 ಖಾಲಿ ಚೆಕ್ಕುಗಳನ್ನು ಪಡೆದುಕೊಂಡು ಆ ಚೆಕ್ಕುಗಳ ಪೈಕಿ ಒಂದನ್ನು ಫಿರ್ಯಾದುದಾರರಿಗೆ ನೀಡಿ ಈ ಪ್ರಕರಣವನ್ನು ದಾಖಲು ಮಾಡಿಸಿರುತ್ತಾರೆ. ಅದರಂತೆ ದಿನಾಂಕಃ13-04-2023 ರಂದು ತಾವು ಪೋಲಿಸರು ನೀಡಿರುವ ದೂರನ್ನು ವಾಪಸ್ಸು ಪಡೆದುಕೊಳ್ಳುತ್ತೇನೆ ಎಂದು ಫಿರ್ಯಾದುದಾರರು ನಿಡಿ.2 ರಂತೆ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಫಿರ್ಯಾದುದಾರರು ಹೇಳಿದಂತೆ ನಾನು ಅವರಿಂದ ಹಣವನ್ನು ಪಡೆದುಕೊಂಡಿರುದಿಲ್ಲ ಮತ್ತು ನಾನು ಅವರಿಗೆ ಯಾವುದೇ ಹಣವನ್ನು ಪಾವತಿ ಮಾಡುವ ಭಾದ್ಯತೆಯನ್ನು ಹೊಂದಿರುವುದಿಲ್ಲ. ಕಾರಣ ಈ ಪ್ರಕರಣವನ್ನು ವಜಾ ಮಾಡಿ ನನ್ನನ್ನು ಖುಲಾಸೆಗೊಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

2. ಸಾಕ್ಷಿ ನಿಡಿ.1 ಮತ್ತು 2 ನ್ನು ನೋಡಿ ಗುರುತಿಸುತ್ತಾರೆ. ದಿನಾಂಕಃ 13-04-2023 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಡಿ.3 ಎಂದು, ದಿನಾಂಕಃ 17-01-2000 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಡಿ.4 ಎಂದು, ಬೆಂಗಳೂರು ನಗರ ಪೋಲಿಸ್ ಆಯುಕ್ತರಿಗೆ ನರಸಿಂಹಮೂರ್ತಿ ರವರು ನೀಡಿದ ದೂರಿನ ಪ್ರತಿಯನ್ನು ನಿಡಿ.5 ಎಂದು, ಕರ್ನಾಟಕ ರಾಜ್ಯದ ಡಿ. ಜಿ. ಪಿ. ರವರಿಗೆ ನರಸಿಂಹಮೂರ್ತಿ ರವರು ನೀಡಿದ ದೂರಿನ ಪ್ರತಿಯನ್ನು ನಿಡಿ.6 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು</u>

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಗಿದೆ )
ಓ. ಹೇ, ಕೇ, ಸರಿ ಇದೆ,

ಪ್ರಧಾನ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಾಗಮಂಗಲ